ಉತ್ತರದಲ್ಲಿ ಪಿ.ಆರ್. ಲಕ್ಷ್ಮೀನಾರಾಯಣ ಸನ್ ಆಫ್ ರಾಮಸ್ವಾಮಯ್ಯ ಎಂದು ಕೊಟ್ಟಿದ್ದಾರೆ. ಭಾರಿ ಬುದ್ಧಿವಂತಿಕೆಯಿಂದ ಯಾರಿಗೂ ಇದು ಗೊತ್ತಾಗದಿರಲೆಂದು ಇನಿಷಿಯಲ್ಲನ್ನು ಅವಾಯ್ಡ್ ಮಾಡಿ ರಾಮಸ್ವಾಮಯ್ಯ ಎಂದು ಕೊಟ್ಟಿದ್ದಾರೆ. ಇದೂ ಅಲ್ಲದೇ ಒಂದೇ ಕುಟುಂಬಕ್ಕೆ ಸೇರಿದಂಥ ನಾಲ್ಕು ಜನರ ಹೆಸರಿನಲ್ಲಿ ಕೂಡ ಭೂ ಮಂಜೂರಾತಿಯನ್ನು ಮಾಡಿದ್ದಾರೆ, ಈ ರೀತಿ ಆಗಬಾರದು, ಇದು ಅಕ್ರಮ ಎಂಬುದೇ ನಾನು ಕೇಳಿರತಕ್ಕಂಥ ಮೂಲ ಉದ್ದೇಶ. ಈ ಬಗ್ಗೆ ಕೂಲಂಕುಷವಾಗಿ ಎನ್‌ಕ್ವೈರಿ ಮಾಡಿಸ ಬೇಕು ಎಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರದ ಅಭಿಪ್ರಾಯ ಏನಿದೆ ಎಂಬು ದನ್ನು ಈಗಾಗಲೇ ತಿಳಿಸಿದ್ದೇನೆ. ಶ್ರೀ ಬೊಮ್ಮಾಯಿ ಸಮಿತಿಯವರು ಈ ಬಗ್ಗೆ ಏನೊಂದು ಅಭಿಪ್ರಾಯ ವನ್ನು ಕೊಡುತ್ತಾರೆಯೋ ಅದನ್ನು ಪರಿಶೀಲನೆ ಮಾಡಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ಭೂಮಿಯನ್ನು ಕಳೆದುಕೊಂಡಂಥವರಿಗೆ ಭೂಮಿಯನ್ನು ಕೊಡಬೇಕಾದ್ದು ಸರ್ಕಾರದ ಕರ್ತವ್ಯ. Under the provisions of Land Acquisition Act, the Government is not bound to give land again, because the moment lands are aquired under the provisions of Land Acquisition Act, compensation will have to be paid to the parties from whom the land is acquired. The question of again granting the lands to the losers does not arise at all unde the law. ಇದರಲ್ಲಿ ಯಾರು ಅಕ್ರಮವಾಗಿ ಕಾಂಪನ್‌ಸೇಷನ್ ಹಣವನ್ನು ತೆಗೆದುಕೊಂಡಿದ್ದಾರೆ ಅಂತಹವರ ಬಗ್ಗೆ ಸರ್ಕಾರದ ಗಮನಕ್ಕೆ ತಂದರೆ ನಾನು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

Law and Order situation in Bangalore City.

648 SRI B. A. MOHIDEEN (Bantwal)— Will the Chief Minister be pleased to state:—

(a) whether it has come to the notice of the Government that the Law and Order situation has deteriorated in Bangalore City, particularly during the nights:

(b) if so, what steps the Government has taken to put down incidences of rape, assault, way-laying, etc, in the City?

SRI R. GUNDU RAO (Chief Minister)—

(a) No

(b) Day and night foot patrolling has been tightened up by deputing more men.

ಶ್ರೀ ಬಿ. ಎ. ಮೊಹಿದ್ದೀನ್.— ಸ್ವಾಮಿ, ಬೆಂಗಳೂರು ನಗರದಲ್ಲಿ ನಡೆಯುತ್ತಾ ಇರತಕ್ಕ ನೈಟ್ ಫೂಟ್ ಪೆಟ್ರೊಲಿಂಗನ್ನು ತಡೆಗಟ್ಟುವುದಕ್ಕೆ ತಾವು ಎಷ್ಟು ಜನ ಸಿನೀಯರ್ ಅಫೀಸರ್‌ಗಳನ್ನು ನೇಮಿಸಿದ್ದೀರಿ?

ಶ್ರೀ ಆರ್. ಗುಂಡೂರಾವ್ .— ಈ ಬಗ್ಗೆ ಎಷ್ಟು ಜನರು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಹಗಲು ಮತ್ತು ರಾತ್ರಿಯ ಹೊತ್ತಿನಲ್ಲಿ ನಡೆಯತಕ್ಕಂಥ ಪೆಟ್ರೋಲಿಂಗನ್ನು ತಡೆಗಟ್ಟುವುದಕ್ಕೆ ಹೆಚ್ಚಿನ ಸಿಬ್ಬಂದಿಯನ್ನು ನಾವು ಹಾಕಿದ್ದೇವೆ ಎಂದು ನಾನು ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಬಿ. ಎ. ಮೊಹಿದ್ದೀನ್ .— ಸ್ವಾಮಿ, ನಾನು ಈ ಪ್ರಶ್ನೆಯನ್ನು ಏತಕ್ಕೆ ಕೇಳಿದ್ದೇನೆ ಎಂದರೆ ಎಲ್ಲಿ ನೋಡಿದರೂ ಕೇವಲ ಒಂದಿಬ್ಬರು ಪೋಲೀಸ್ ಪೆದೆಗಳು ನೈಟ್ ಪೆಟ್ರೊಲಿಂಗ್‌ನಲ್ಲಿ ಇರುತ್ತಾರೆ, ಆಲ್ಲದೇ ಬೆಂಗಳೂರಿನಲ್ಲಿ ಕ್ಲಬ್‌ಗಳು, ಬಾರ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಇವೆ. ಅವು ರಾತ್ರಿ ೨ ಗಂಟೆಯ ವರೆಗೂ ನಡೆಯುತ್ತಿವೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಆರ್. ಗುಂಡೂರಾವ್ .— ನಾನು ಅದಕ್ಕೆ ಆಗಲೇ ಹೇಳಿದೆನಲ್ಲಾ ಬೆಂಗಳೂರು ನಗರದಲ್ಲಿ ನೈಟ್ ಪೆಟ್ರೋಲಿಂಗ್ ಜಾಸ್ತಿ ಇದೆ. ಅದಕ್ಕಾಗಿ ಜಾಸ್ತಿ ಅಧಿಕಾರಿಗಳನ್ನು ಹಾಕಿದ್ದೇವೆ. ಅವರು ಈ ದಿಶೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ರಮೇಶ್ ಕುಮಾರ್ .— ಮಾನ್ಯ ಸ್ನೇಹಿತರು ವಿಶೇಷವಾಗಿ ರಾತ್ರಿ ಹೊತ್ತಿನ ಮಾಹಿತಿ ಕೇಳಿದ್ದಾರೆ. ಹಗಲು ಹೊತ್ತಿನ ಮಾಹಿತಿ ಕೇಳಿದ್ದರೆ ಒಳ್ಳೆಯದಿತ್ತು.

ಶ್ರೀ ಆರ್. ಗುಂಡುರಾವ್ .— ಒಳ್ಳೆಯ ಸಲಹೆ.

ಶ್ರೀ ಎ. ಲಕ್ಷ್ಮೀಸಾಗರ್ .— ಮಾನ್ಯ ಮುಖ್ಯ ಮಂತ್ರಿಗಳು ಪೋಲೀಸ್ ದಳದ ಸಂಖ್ಯೆ ಹೆಚ್ಚು ಮಾಡಿದ್ದೇವೆ. ಅವರು ಗಸ್ತು ತಿರುಗುತ್ತಿದ್ದಾರೆ ಎನ್ನತಕ್ಕ ವಿಚಾರ ತಿಳಿಸಿವ್ದಾರೆ. ಈ ವರ್ಷದ ಜನವರಿ ಯಿಂದ ಇಲ್ಲಿಯವರೆಗೆ ಇವರ ಕಾರ್ಯ ಕ್ರಮದ ಪರಿಣಾಮವಾಗಿ, ಅವರ ರಾತ್ರಿ ಗಸ್ತಿನ ಪರಿಣಾಮವಾಗಿ ಎಷ್ಟು ಮೊಕದ್ದಮೆಗಳನ್ನು ಹೂಡಿದ್ದಾರೆ; ಇದರ ಪರಿಣಾಮ ಎಷ್ಟು ಸಫಲವಾಗಿ ಜನರಿಗೆ ಇದರಿಂದ ಎಷ್ಟು ನೆಮ್ಮದಿ ಸಿಕ್ಕುವುದಕ್ಕೆ ಅವಕಾಶವಾಗಿದೆ ಎಂಬ ಅಂಕಿ ಅಂಶಗಳನ್ನು ತಿಳಿಸುತ್ತೀರಾ?

ಶ್ರೀ ಆರ್. ಗುಂಡೂರಾವ್ .— ಕಳೆದ ವರ್ಷದ್ದು ಇಲ್ಲ, ಈ ವರ್ಷದ್ದು ಬೇಕಾದರೆ ಕೊಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ತಾತ್ವಿಕವಾಗಿ ಹಿಂದಿನವರ್ಷಕ್ಕೆ ನೀವು ಜವಾಬ್ದಾರರಲ್ಲ. Though of course, he may in a different way be responsible. ಜನವರಿಯಿಂದ ಕೊಡಿ ಸಾಕು.

ಶ್ರೀ ಆರ್. ಗುಂಡೂರಾವ್ .—ಸುಮಾರು ೬೭ ರಾಬರಿ ಕೇಸ್ ಆಗಿದೆ. ಅದರಲ್ಲಿ ೨೧ ಡಿಟೆಕ್ಟೆಡ್ ಮಾಡಿದ್ದೇವೆ. ಆಮೇಲೆ ಸಣ್ಣ ಸಣ್ಣವು ಹರ್ಟ್ ಕೇಸಸ್ ೧೮೭ ಆಗಿವೆ. ಸುಮಾರು ೮೦ ಕೇಸುಗಳನ್ನು ಡಿಟೆಕ್ಟೆಡ್ ಮಾಡಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.— ನೈಟ್ ಕ್ಲಬ್ಬ್‌ಗಳನ್ನು ರೈಡ್‌ಮಾಡಿದ ಸಂಖ್ಯೆ ಎಷ್ಟು, ಕಟ್ಟೆ ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಂಡ ಸಂಖ್ಯೆ ಎಷ್ಟು?

ಶ್ರೀ ಆರ್. ಗುಂಡೂರಾವ್ .— ನೈಟ್ ಕ್ಲಬ್‌ಗಳ ಬಗ್ಗೆ ಮಾಹಿತಿ ಇಲ್ಲ, ಬೇಕಾದರೆ ಒದಗಿಸಿ ಕೊಡುತ್ತೇನೆ.

SRI AZEEZ SAIT .— The Hon. Chief Minister assertively said that police security arrangements have been tightened. I want to know why looting, arson and murder cases have been occurring, often and often all over the State? Even yesterday ಮೈಸೂರಿದಲ್ಲಿ ಇದ್ದಕ್ಕಿದ್ದಹಾಗೆ ಎಲ್ಲಾ ಹುಡುಗರು ಸೈಕಲ್‌ಶಾಪ್‌ಗೆ ಹೋಗಿ ಲೂಟಿ ಮಾಡಿದರು. Though police are assertive why all these things are happening?

ಶ್ರೀ ಆರ್. ಗುಂಡೂರಾವ್ .— ಪೋಲೀಸರು ಅಸರ್‌ಟೀವಾಗಿ ಕೆಲಸಮಾಡುತ್ತಿದ್ದಾರೆ. ಕ್ರೈಂ ಆದ ಮೇಲೆ ಪೋಲೀಸರು ಹೋಗುತ್ತಾರೆ. ಮೈಸೂರಿನ ಘಟನೆ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ನಾನು ವಿವರವನ್ನು ಒದಗಿಸಿಕೊಡುತ್ತೇನೆ.

Abolition of land Tax

434 SRI KADIDAL DIWAKER (Thirthahalli)— Will the Minister for Revenue and Agriculture be pleased to state.—

(*a*) whether Government intended to abolish Land Revenue to the extent of one Unit of cultivable land;

(*b*) if so, when Government will bring into force the proposed decision;